**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಚೇರಿ,ಗುಲಬರ್ಗಾ.**

ಸಂಖ್ಯೆ:ಸಿ2(1)ಆಡಳಿತ/ಮು.ಗು/ಬಡ್ತಿ/108/2011-12 ದಿನಾಂಕ 11-5-2012

1.ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಗುಲಬರ್ಗಾ/ರಾಯಚೂರು/ಯಾದಗೀರ/
ಬಳ್ಳಾರಿ/ಬೀದರ ಮತ್ತು ಕೊಪ್ಪಳ

2. ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪದನಿಮಿತ್ತ ಪ್ರಾಂಶುಪಾಲರು
ಗುಲಬರ್ಗಾ ವಿಭಾಗದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು

ವಿಷಯ:-ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹುದ್ದೆಯಲ್ಲಿ ನಿಯಮ-32 ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಅರ್ಹ ಪ್ರೌಢಶಾಲಾ ಸಹ ಶಿಕ್ಷಕರಿಗೆ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.

ಉಲ್ಲೇಖ:-1. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರ ಅಧಿಕೃತ ಜ್ಞಾಪನ ಸಂಖ್ಯೆ ಸಿ1(4)ಮು.ಶಿ.ನೇಮಕಾತಿ/13/2007-08 ದಿನಾಂಕ 16-12-2011.

2. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರ ಅಧಿಕೃತ ಜ್ಞಾಪನ ಸಂಖ್ಯೆ ಸಿ1(4)ಮುಶಿ.ನೇಮಕಾತಿ/13/2007-08 ದಿನಾಂಕ 27-4-2012.

3. ನಿರ್ದೇಶಕರು ಅಪರ ಆಯುಕ್ತರ ಕಚೇರಿ ಗುಲಬರ್ಗಾ ರವರ ಪತ್ರ ಸಂಖ್ಯೆ ಸಿ4(1)ಪ್ರೌಶಾಶಿ/ಶಿಕ್ಷಕ/ಸೇವಿಮಾಹಿತಿ/64/2012-13 ದಿನಾಂಕ 11-5-2012.

-

ಸಾರ್ವಜನಿಕ ಶಿಕ್ಷಣ ಇಲಾಖೆಯ ಗುಲಬರ್ಗಾ ಆಯುಕ್ತಾಲಯ ವ್ಯಾಪ್ತಿಯಲ್ಲಿ ಬರುವ ಗ್ರೂಪ್-ಬಿ ಮುಖ್ಯ ಶಿಕ್ಷಕರ ವೃಂದದ 141 ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ಉಲ್ಲೇಖ-1 ರಂತೆ ಬಡ್ತಿಗೆ ಅರ್ಹರಿರುವ ನಿಯಮ-32 ರಡಿ ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಉಲ್ಲೇಖ-2 ರಂತೆ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದದ ಹುದ್ದೆಗಳನ್ನು ಬ್ಲಾಕ್ ವಾರು ಪರಿಗಣಿಸಿ ದಿನಾಂಕ 31-10-2006 ರವರೆಗೆ 50:50 ಅನುಪಾತದಲ್ಲಿ ಹಾಗೂ ದಿನಾಂಕ 31-10-2006 ರ ನಂತರ ಉದ್ಭವವಾದ ಹುದ್ದೆಗಳನ್ನು 25:75 ರ ಅನುಪಾತದಂತೆ ಪರಿಗಣಿಸಿ ನೇರನೇಮಕಾತಿ ಹಾಗೂ ಬಡ್ತಿಗಾಗಿ ಹುದ್ದೆಗಳನ್ನು ಸರ್ಕಾರದ ಆದೇಶಗಳಂತೆ ವಗೀಕರಿಸಲಾಗಿದ್ದು, ಅದರಂತೆ ನ್ಯಾಯಾಲಯದ ಆದೇಶದ ಅನುಸಾರ ಬದಲಾಯಿಸಿ ಬಡ್ತಿಗೆ ಲಭ್ಯವಾಗುವ ಹುದ್ದೆಗಳನ್ನು ಆಯುಕ್ತಾಲಯವಾರು ವಿಂಗಡಿಸಿ ಗುಲಬರ್ಗಾ ವಿಭಾಗಕ್ಕೆ 390 ಹುದ್ದೆಗಳನ್ನು ಹಂಚಿಕೆ ಮಾಡಲಾಗಿದೆ. ಉಲ್ಲೇಖ-3 ರಂತೆ ಪ್ರೌಢಶಾಲಾ ಸಹ ಶಿಕ್ಷಕರ ಜೇಷ್ಠತಾ ಪಟ್ಟಿ ಈಗಾಗಲೇ ಇಲಾಖಾ ಅಂತರಜಾಲ (ವೆಬ್ ಸೈಟ್) cpigulbarga @ gmail.com ಸರ್ಕಾರಿ ಪ್ರೌಢಶಾಲಾ

ಸಹ ಶಿಕ್ಷಕರುಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಅದರಂತೆ ಬಡ್ತಿಗೆ ಅರ್ಹತೆ ಇರುವ ಸಂಬಂಧಿಸಿದ ದಾಖಲೆಗಳೊಂದಿಗೆ ಇಲಾಖಾ ಮುಂಬಡ್ತಿ ಸಮಿತಿಗೆ ಮಂಡಿಸಬೇಕಾಗಿದೆ.

**ತಮ್ಮ ವ್ಯಾಪ್ತಿಯಲ್ಲಿ ಬರುವ ಅರ್ಹ ಶಿಕ್ಷಕರಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಮಾಹಿತಿಯನ್ನು ಅಗತ್ಯ ದಾಖಲೆಗಳೊಂದಿಗೆ ದಿನಾಂಕ 18-5-2012 ದೊಳಗಾಗಿ ಖುದ್ದಾಗಿ ಸಲ್ಲಿಸುವುದು.**

1. ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲಾದ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿರುವ ಶಿಕ್ಷಕರುಗಳಿಗೆ ತಮ್ಮ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ತಮ್ಮ ಜಿಲ್ಲೆಯ ಪ್ರೌಢಶಾಲಾ ಸಹ ಶಿಕ್ಷಕರ ಹಾಗೂ ನಿಯಮ-32 ರಡಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರುಗಳ ಸೇವಾ ವಿವರದ ಪಟ್ಟಿಯೊಂದಿಗೆ ತಾಳೆ ಮಾಡಿಕೊಂಡ ನಂತರ ಪ್ರಸ್ತಾವನೆ ಒದಗಿಸುವುದು.
2. ಬಡ್ತಿ ಪ್ರಸ್ತಾವನೆ ಸಲ್ಲಿಸುವಾಗ ಜೇಷ್ಠತಾ ಪಟ್ಟಿಯಲ್ಲಿರುವ ಶಿಕ್ಷಕರುಗಳು ಬೇರೆ ಜಿಲ್ಲೆಗಳಿಗೆ ವರ್ಗಾವಣೆಯಾಗಿದ್ದಲ್ಲಿ, ಅವರು ಯಾವ ಜಿಲ್ಲೆಗೆ ವರ್ಗಾವಣೆಯಾಗಿದ್ದಾರೆ ಎಂಬ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು ಹಾಗೂ ನಿಧನ, ನಿವೃತ್ತಿ ಇಲಾಖೆ ಬಿಟ್ಟು ಹೋಗಿದ್ದಲ್ಲಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗೆ ಈಗಾಗಲೇ ಬಡ್ತಿ ಹೊಂದಿದ್ದಲ್ಲಿ ಹಾಗೂ ಮುಖ್ಯ ಗುರುಗಳು ಬಡ್ತಿ ನಿರಾಕರಿಸಿದ್ದಲ್ಲಿ ಅಂತಹ ಶಿಕ್ಷಕರುಗಳ ಹೆಸರುಗಳನ್ನು ಅನುಬಂಧದಲ್ಲಿರುವ ಕ್ರಮ ಸಂಖ್ಯೆ ಗ್ರೇಡ್ ಸಂಖ್ಯೆ ಇತ್ಯಾದಿ ವಿವರಗಳೊಂದಿಗೆ ಪಟ್ಟಿಯನ್ನು ತಯ್ಯಾರಿಸಿ ಸಲ್ಲಿಸುವುದು.
3. ಕಾರ್ಯನಿರ್ವಹಣಾ ವರದಿಗಳಲ್ಲಿ ಸಂಬಂಧಿಸಿದ ವರದಿ ಮಾಡುವ ಪರಿಶೀಲಿಸುವ ಹಾಗೂ ಅಂಗೀಕರಿಸುವ ಪ್ರಾಧಿಕಾರಿಗಳ ಷರಾ ಸಹಿ ಮತ್ತು ಮೊಹರಿನೊಂದಿಗೆ ಸಲ್ಲಿಸುವುದು. ಈ ವರದಿ ನೀಡಲು ಸಾಧ್ಯವಾಗದೇ ಇರುವ ಪ್ರಕರಣಗಳಲ್ಲಿ ಮಾತ್ರ ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ವಿಶೇಷ ಧೃಢೀಕರಣ ಪತ್ರ ನೀಡುವುದು.
4. ಅರ್ಹ ಪ್ರೌಢಶಾಲಾ ಶಿಕ್ಷಕರುಗಳ ಹಾಗೂ ನಿಯಮ-32 ರಡಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರುಗಳಿಗೆ ಸಂಬಂಧಿಸಿದಂತೆ ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಶಿಸ್ತು ಕ್ರಮ ಇಲ್ಲದಿರುವ ಬಗ್ಗೆ ಧೃಢೀಕರಣ ಪತ್ರ ನೀಡುವುದು. ಶಿಸ್ತು ಕ್ರಮ/ ಇಲಾಖಾ ವಿಚಾರಣೆ ಬಾಕಿ ಇರುವ ಪ್ರಕರಣಗಳಲ್ಲಿ ಈ ಧೃಢೀಕರಣ ಪತ್ರವನ್ನು ನೀಡದೇ ಪ್ರಕರಣದ ಪ್ರಸ್ತುತ ಹಂತದ ಬಗ್ಗೆ ದಾಖಲೆ ಸಹಿತ ಮಾಹಿತಿಯನ್ನು ಒದಗಿಸುವುದು.
5. ಕ್ರಿಮಿನಲ್ ಮೊಕದ್ದಮೆ ಅಥವಾ ನ್ಯಾಯಾಲಯದ ಪ್ರಕರಣ ಬಾಕಿ ಇದ್ದಲ್ಲಿ ಅಂತಹ ಶಿಕ್ಷಕರುಗಳ ವಿವರ ಹಾಗೂ ದಾಖಲೆ ಸಹಿತ ಮಾಹಿತಿಯನ್ನು ಒದಗಿಸುವುದು.

| | |
|---|---|
| 1 | ಇತ್ತೀಚಿನ 5 ವರ್ಷಗಳ ಕಾರ್ಯನಿರ್ವಹಣಾ ವರದಿ ಹಾಗೂ ಕಾರ್ಯ ನಿರ್ವಹಣಾ ವರದಿ ಲಭ್ಯವಿಲ್ಲದ ವರ್ಷಕ್ಕೆ ಮಾತ್ರ ವಿಶೇಷ ವರದಿ (ಕಾರ್ಯ ನಿರ್ವಹಣಾ ವರದಿಗಳಲ್ಲಿ ವರದಿ ಮಾಡುವ,ಪರಿಶೀಲನಾ ಮತ್ತು ಅಂಗೀಕಾರ ಪ್ರಾಧಿಕಾರಿಗಳ ಷರಾ ಮತ್ತು ಸಹಿಗಳೊಂದಿಗೆ ಸಲ್ಲಿಸತಕ್ಕದ್ದು) |
| 2 | ಶಿಸ್ತಿನ ಕ್ರಮ/ ಇಲಾಖಾ ವಿಚಾರಣೆ ಬಾಕಿ ಇರುವ/ಇಲ್ಲದೆ ಇರುವ ಬಗ್ಗೆ ವಿವರ ಹಾಗೂ ಕ್ರಿಮಿನಲ್ ಮೊಕದ್ದಮೆ ಇರುವ/ಇಲ್ಲದೆ ಇರುವ ಬಗ್ಗೆ ಧೃಢೀಕರಣ ಪತ್ರ (ಲಗತ್ತಿಸಿರುವ ನಮೂನೆಯಲ್ಲಿ) |
| 3 | ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರದ ಪ್ರತಿ ಮತ್ತು ಇಲಾಖಾ ಪರೀಕ್ಷೆ ತೇರ್ಗಡೆ ಆಗಿರುವ ದಾಖಲೆಗಳ ಧೃಢೀಕರಣ ಪ್ರತಿ. |

| | |
|---|---|
| 4 | ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ/ ವಿನಾಯ್ತಿ ಪಡೆದ ದಾಖಲೆಗಳ ಪ್ರತಿ |
| 5 | ಪ.ಜಾತಿ/ಪ.ಪಂಗಡಗಳಿಗೆ ಸೇರಿದ ಶಿಕ್ಷಕರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ ಧೃಢೀಕೃತ ಪ್ರತಿ ಆಥವಾ ಸೇವಾ ಪುಸ್ತಕದ ಉದ್ಧೃತ ಧೃಢೀಕೃತ ಪ್ರತಿ. |
| 6 | ಹಿಂದಿ ಶಿಕ್ಷಕರಾದಲ್ಲಿ ಹಿಂದಿ ಶಿಕ್ಷಣ ಪಾರಂಗತ ಪ್ರಮಾಣ ಪತ್ರದ ಪ್ರತಿ. ಪಿಯುಸಿ ಯಲ್ಲಿ ತೇರ್ಗಡೆ ಹೊಂದಿರುವ ಪ್ರಮಾಣ ಪತ್ರದ ಪ್ರತಿ |

**ಮೇಲ್ಕಂಡ ವಿವರಗಳೊಂದಿಗೆ ಪ್ರತಿ ಶಿಕ್ಷಕರ ಬಡ್ತಿ ಪ್ರಸ್ತಾವನೆಯನ್ನು ಪ್ರತ್ಯೇಕ ಡೋಸಿಯರ್ ಗಳಲ್ಲಿ ಸಿದ್ಧಪಡಿಸಿ ಈ ಕಚೇರಿಗೆ ದಿನಾಂಕ 18-5-2012 ರೊಳಗಾಗಿ ನಿಮ್ಮ ಕಚೇರಿಯ ಸಿಬ್ಬಂದಿಯವರ ಮೂಲಕ ಈ ಕಚೇರಿಯಿಂದ ನೆನಪೋಲೆಯನ್ನು ನಿರೀಕ್ಷಿಸದೇ (ಕಾಲಮಿತಿಗೆ ಒಳಪಟ್ಟಿರುವುದರಿಂದ) ಮುದ್ದಾಂ ಸಲ್ಲಿಸುವಂತೆ ತಿಳಿಸಿದೆ.**

**ಬಡ್ತಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಈ ಕೆಳಕಂಡ ಸೂಚನೆಗಳನ್ನು ಗಮನಿಸುವುದು.**

**ಮೇಲಿನ ಪ್ರಕರಣಗಳಲ್ಲದೇ ಸರ್ಕಾರಿ ಘಟಕ ಟಿ.ಡಿ.ಬಿ ಘಟಕ ಮತ್ತು ಮುನ್ಸಿಪಲ್ ಘಟಕ ಇವುಗಳಲ್ಲಿ ಜೇಷ್ಠತೆಯಲ್ಲಿ ಹಿರಿಯರಾಗಿದ್ದು, ವಿವಿಧ ಕಾರಣಗಳಗಾಗಿ ಬಿಟ್ಟು ಹೋಗಿರುವ ಪ್ರಕರಣಗಳಿದ್ದಲ್ಲಿ ಸ್ಥಾನಪನ್ನ ಬಡ್ತಿಗೆ ಅರ್ಹರಿದ್ದಲ್ಲಿ ಅಂತಹ ಪ್ರಕರಣಗಳನ್ನು ಸಹ ಸಕಾರಣಗಳೊಂದಿಗೆ ನಮೂನೆ-1 ಹಾಗೂ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.** ಈ ಕಚೇರಿಯ ಅಧಿಸೂಚನೆ ಸಂಖ್ಯೆ_ಸಿ2(1)ಆಡಳಿತ/ಮು.ಗು/ಬಡ್ತಿ/11/2009-10 ದಿನಾಂಕ 9-7-2010 ರಲ್ಲಿ ನೀಡಲಾದ ಸ್ಥಾನ ಪನ್ನ ಬಡ್ತಿಯಲ್ಲಿನ ಕಟ್ ಆಫ್ ಸಂಖ್ಯೆಯು ಕೆಳಗಿನಂತಿರುತ್ತದೆ.

| ವರ್ಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಸೇವೆ ಸಕ್ರಮಗೊಂಡ ದಿನಾಂಕ |
|---|---|---|---|
| ಸಾಮಾನ್ಯ | 22-7-1956 | 14-8-1984 | 20-2-1991 |
| ಪ.ಜಾತಿ | 06-09-1968 | 29-10-1994 | 29-10-1994 |
| ಪ.ಪಂಗಡ | 19-5-1966 | 27-10-1994 | 27-10-1994 |

**ಈ ಕಟ್ ಆಫ್ ದಿನಾಂಕಗಳನ್ನು ಗಮನದಲ್ಲಿಟ್ಟುಕೊಂಡು ಈ ದಿನಾಂಕಕ್ಕಿಂತ ಹಿರಿಯರಾಗಿದ್ದು,ಅರ್ಹತೆ ಇದ್ದರೂ ಸಹ ಹಿಂದೆ ನೀಡಲಾದ ಬಡ್ತಿಯಲ್ಲಿ ಬಿಟ್ಟು ಹೋದಂತಹ ಶಿಕ್ಷಕರಿದ್ದಲ್ಲಿ ಅಂತಹ ಶಿಕ್ಷಕರ ಪ್ರಸ್ತಾವನೆಯನ್ನು ಸಹ ಕಳುಹಿಸುವುದು.**

***ಉಲ್ಲೇಖ-2 ರನ್ವಯ 25-75 ಅನುಪಾತದಂತೆ ಪರಿಗಣಿಸಿ ನೇರನೇಮಕಾತಿ ಹಾಗೂ ಬಡ್ತಿಗಾಗಿ ಹುದ್ದೆಗಳನ್ನು ವರ್ಗೀಕರಿಸಿ ಅದರಂತೆ ಬಡ್ತಿಗಾಗಿ ಹುದ್ದೆಗಳನ್ನು ಈ ವಿಭಾಗಕ್ಕೆ ಹೆಚ್ಚುವರಿಯಾಗೀ ಹಂಚಿಕೆ ಮಾಡಲಾಗಿದೆ. ಕಾರಣ ಈ ಕೆಳಕಂಡ ಕಟ್ ಆಫ್ ದಿನಾಂಕದವರೆಗೆ ಸ್ಥಾನ ಪನ್ನ ಬಡ್ತಿ ನೀಡಲು ಅರ್ಹರಿರುವ ನಿಯಮ-32/ ಹಾಗೂ ಸಹ ಶಿಕ್ಷಕರುಗಳ ಮಾಹಿತಿಯನ್ನು ಕೇಳಲಾಗಿದ್ದು ಒಂದು ವೇಳೆ ನೀಡಿದಂತಹ ಪಟ್ಟಿಯಲ್ಲಿ ಈ ದಿನಾಂಕದೊಳಗಡೆ ಅರ್ಹ ಅಭ್ಯರ್ಥಿಗಳನ್ನು ಬಿಟ್ಟು ಹೋದಲ್ಲಿ ಅವರನ್ನು ಸಹ ಇದರಲ್ಲಿ ಸೇರಿಸಿ ಕಳುಹಿಸುವುದು.***

***<u>ಈಗಾಗಲೇ ಸಲ್ಲಿಸಲ್ಪಟ್ಟ ಶಿಕ್ಷಕರುಗಳ ಮಾಹಿತಿಯನ್ನು ಪರಿಶೀಲಿಸಿ ಇನ್ನೂಳಿದಂತೆ ಅರ್ಹ ಅಭ್ಯರ್ಥಿಗಳ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ವಿವರ ಭರ್ತಿ ಮಾಡಿ ಸಲ್ಲಿಸುವುದು.</u>***

| ವರ್ಗ | ಜೇಷ್ಠತಾ ಸಂಖ್ಯೆ (ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲಾದ ಜೇಷ್ಠತಾ ಪಟ್ಟಿ) | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಸೇವೆ ಸಕ್ರಮಗೊಂಡ ದಿನಾಂಕ |
|---|---|---|---|---|
| ಸಾಮಾನ್ಯ | 750 | 01-05-1967 | 14-11-1994 | 14-11-1994 |
| ಪ.ಜಾತಿ | 1426 | 23-8-1970 | 26-8-1998 | 26-8-1998 |
| ಪ.ಪಂಗಡ | 1449 | 01-6-1971 | 27-8-1998 | 27-8-1998 |

**ವಿಶೇಷ ಸೂಚನೆ:-**

ಬಡ್ತಿಯನ್ನು ನೀಡುವ ಪ್ರಕ್ರಿಯೇಯು ಸಮಯಬದ್ದ ಪ್ರಕರಣವಾಗಿರುವದರಿಂದ ಎಲ್ಲಾ ಉಪನಿರ್ದೇಶಕರುಗಳು ವಿಳಂಬ ಮಾಡದೇ ತಮ್ಮ ವೈಯಕ್ತಿಕ ಗಮನವನ್ನುಹರಿಸಿ ದಿನಾಂಕ 17-5-2012 ರಂದು ಬಡ್ತಿಗೆ ಅರ್ಹರಿರುವ ಎಲ್ಲ ಶಿಕ್ಷಕರುಗಳನ್ನು ಸಂಬಂಧಿಸಿದ ಎಲ್ಲಾ ದಾಖಲೆಗಳೊಂದಿಗೆ ತಮ್ಮ ಕಚೇರಿಗೆ ಮುದ್ದಾಂ ಕರೆದು ಅವರುಗಳಿಂದ ಮಾಹಿತಿಯನ್ನು ಪಡೆದು ಪ್ರಸ್ತಾವನೆಯನ್ನು ಮೇಲೆ ತಿಳಿಸಿರುವ ಎಲ್ಲಾ ಸೂಚನೆಗಳನ್ವಯ ಸಿದ್ದಪಡಿಸಿಕೊಳ್ಳತಕ್ಕದ್ದು.

ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಸೇವಾ ವಿವರಗಳು ಹಾಗೂ ಅಗತ್ಯ ದಾಖಲೆಗಳ ಧೃಢೀಕೃತ ಪ್ರತಿಯೊಂದಿಗೆ ಪ್ರತಿ ಶಿಕ್ಷಕರಿಗೆ ಪ್ರತ್ಯೇಕವಾದ ಡೋಸಿಯರ್‌ನಲ್ಲಿ ಸಿದ್ದಪಡಿಸಿ ದಿನಾಂಕ 18-05-2012_ರಂದು ತಮ್ಮ ಕಚೇರಿಯ ಸಂಬಂಧಿಸಿದ ವಿಷಯ ನಿರ್ವಾಹಕರ ಮೂಲಕ ಈ ಕಚೇರಿಗೆ ಮುದ್ದಾಂ ಕಳುಹಿಸಿ ಕೆಳಕಂಡ ಅಧಿಕಾರಿಗಳಿಗೆ ಸಲ್ಲಿಸುವುದು.

ಪ್ರಸ್ತಾವನೆ ಮುದ್ದಾಂ ಸಲ್ಲಿಸಬೇಕಾದ ಅಧಿಕಾರಿಯ ವಿವರ

ಶ್ರೀ ಎಂ.ಹೆಚ್.ಡೋಣೂರ
ಸಹನಿರ್ದೇಶಕರು(ಆಡಳಿತ)
ಅಪರ ಆಯುಕ್ತರ ಕಚೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ
ಗುಲಬರ್ಗಾ.

(ಎಸ್.ಜಿ.ವಾಲಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಗುಲಬರ್ಗಾ

ಪ್ರತಿಯನ್ನು.
1.ನಿರ್ದೇಶಕರ ಆಪ್ತ ಶಾಖೆಗೆ/ ಸಹನಿರ್ದೇಶಕರ (ಆಡಳಿತ) ರವರ ಆಪ್ತ ಶಾಖೆಗೆ
2.ಕಚೇರಿ ಕಡತಕ್ಕೆ.

## ನಮೂನೆ–1

ಪಟ್ಟಿಯಲ್ಲಿನ ಕ್ರಮ ಸಂಖ್ಯೆ--------------- ಜೇಷ್ಠತಾ ಸಂಖ್ಯೆ----------------

ಪ್ರೌಢಶಾಲಾ ಸಹ ಶಿಕ್ಷಕರಿಗೆ ಗ್ರೂಪ್–ಬಿ ವೃಂದದ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಕುರಿತು ಪರಿಶೀಲಿಸಲು ಬೇಕಾದ ಮಾಹಿತಿ.

| ಕ್ರಮ ಸಂಖ್ಯೆ | ವಿವರ | ಮಾಹಿತಿ |
|---|---|---|
| 1 | ಶಿಕ್ಷಕರ ಹೆಸರು ಕಾರ್ಯನಿರ್ವಹಿಸುತ್ತಿರುವ ಹುದ್ದೆ ಮತ್ತು ವಿಳಾಸ (ಸೇವಾ ಪುಸ್ತಕದಲ್ಲಿ ನಮುದಿಸಿರುವಂತೆ ಹಿಂದಿ ಶಿಕ್ಕಕರಾದಲ್ಲಿ ತಪ್ಪದೆ ಹಿಂದಿ ಶಿಕ್ಷಕರೆಂದು ನಮೂದಿಸುವುದು) | |
| 2 | ಜನ್ಮ ದಿನಾಂಕ | |
| 3 | ಹುದ್ದೆ (ನಿಯಮ–32 ಮುಶಿ/ಸಹಶಿಕ್ಷಕರು | |
| 4 | ವಿದ್ಯಾರ್ಹತೆ | |
| 5 | ಜೇಷ್ಠತಾ ಸಂಖ್ಯೆ | |
| 6 | ನೇಮಕಾತಿ ವಿಧಾನ | |
| 7 | ಸೇವೆಗೆ ಸೇರಿದ ದಿನಾಂಕ | |
| 8 | ಸೇವಾ ಸಕ್ರಮಗೊಂಡ ದಿನಾಂಕ | |
| 9 | ಗುಲಬರ್ಗಾ ವಿಭಾಗಕ್ಕೆ ವರ್ಗಾವಣೆಯಾಗಿ ಬಂದ ದಿನಾಂಕ | |
| 10 | ಖಾಯಂ ಪೂರ್ವ ಸೇವಾವಧಿ ಘೋಷಣೆ ಆಗಿದೆಯೇ? | |
| 11 | ಎ. ಸ್ಥಳೀಯ ಅಭ್ಯರ್ಥಿಯಾಗಿ ನೇಮಕಗೊಂಡವರೇ?<br>ಬಿ. ಹೌದಾದಲ್ಲಿ ಸ್ಥಳೀಯ ಅಭ್ಯರ್ಥಿಯಾಗಿ ಯಾವ ದಿನಾಂಕದಿಂದ ಕಾರ್ಯನಿರ್ವಹಿಸಿದ್ದೀರಿ.<br>ಸಿ. ಸೇವೆ ಸಕ್ರಮಗೊಂಡ ಆದೇಶ ಸಂಖ್ಯೆ ದಿನಾಂಕ<br>ಡಿ. ಖಾಸಗಿ ಶಾಲೆ ಸರ್ಕಾರಕ್ಕೆ ವಹಿಸಿಕೋಂಡ ಶಾಲೆಯಾದಲ್ಲಿ ಯಾವ ಆದೇಶದ ಪ್ರಕಾರ ಸರ್ಕಾರಕ್ಕೆ ವಹಿಸಿಕೊಳ್ಳಲಾಗಿದೆ.<br>ಇ. ಯಾವ ಆದೇಶ ಮತ್ತು ಯಾವ ದಿನಾಂದಿಂದ ಸೇವೆ ಸರ್ಕಾರಕ್ಕೆ ಸೇರ್ಪಡೆಯಾಗಿದೆ.<br>ಎಫ್. ನೇರ ನೇಮಕಾತಿ ಆದವರಾದಲ್ಲಿ ನೇಮಕಗೊಂಡ ಆದೇಶದ ಸಂಖ್ಯೆ ಮತ್ತು ದಿನಾಂಕ | |

| | | |
|---|---|---|
| | | |
| 12 | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದವರೇ? (ಜಾತಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ/ಸೇವಾ ಪುಸ್ತಕದ ಉದ್ಧೃತ ದೃಢೀಕೃತ ಪ್ರತಿ ಲಗತ್ತಿಸುವುದು) | |
| 13 | ಇಲಾಖಾ ಪರೀಕ್ಷೆ ತೇರ್ಗಡೆ ವಿವರ (ದೃಢೀಕೃತ ಪ್ರತಿಗಳನ್ನು ಲಗತ್ತಿಬೇಕು)<br>ಎ) ಅಕೌಂಟ್ಸ ಹೈಯರ<br><br>ಬಿ) ಜನರಲ್ ಲಾ ಭಾಗ-1<br><br>ಸಿ) ಕನ್ನಡ ಭಾಷಾ ಪರೀಕ್ಷೆ<br><br>ಡಿ) ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ ವಿನಾಯ್ತಿ ಪಡೆದಿದ್ದಲ್ಲಿ, ಎಸ್.ಎಸ್.ಎಲ್.ಸಿ ತೆರ್ಗಡೆ ಪತ್ರದ ಪ್ರತಿ ಹಾಗೂ ವಿನಾಯ್ತಿ ಪತ್ರ ನಮೂನೆ (ಕೆ.ಸಿ.ಎಸ್.ಆರ್ ರನ್ವಯ) | |
| 14 | ದೂರುಗಳು/ಶಿಸ್ತಿನ ಕ್ರಮ/ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ ವಿವರ | |
| 15 | ಐದು ವರ್ಷಗಳ ಕಾರ್ಯನಿರ್ವಹಣಾ ವರದಿಗಳು (2006-07 ರಿಂದ 2010-11 ರವರೆಗೆ) ಅಂಗೀಕಾರ ಪ್ರಾಧಿಕಾರದ ಷರಾ ಮತ್ತು ಸಹಿಯೊಂದಿಗೆ (ಕಾರ್ಯನಿರ್ವಹಣಾ ವರದಿಗಳು/ಲಭ್ಯವಿಲ್ಲದಿದ್ದಲ್ಲಿ ಮಾತ್ರ ವಿಶೇಷ ವರದಿ) | |

ಮೇಲಿನ ವಿವರಗಳನ್ನು ಶಿಕ್ಷಕರ ಸೇವಾ ಪುಸ್ತಕ ಪರಿಶೀಲಿಸಿ ದೃಢೀಕರಿಸಿದೆ.

ಶಾಲೆ/ಸಂಸ್ಥೆಯ ಮುಖ್ಯಸ್ಥರ ಸಹಿ
ಮೊಹರಿನೊಂದಿಗೆ

ಉಪನಿರ್ದೇಶಕರು(ಆಡಳಿತ/ಅಭಿವೃದ್ಧಿ)
ಸಾರ್ವಜನಿಕ ಶಿಕ್ಷಣ ಇಲಾಖೆ
--------------- ಜಿಲ್ಲೆ

ಸೂಚನೆ: 1. ನಿಯಮ-32 ರಡಿ ಗ್ರೂಪ-ಬಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರ ಸೇವಾ ವಿವರಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇವಾ ಪುಸ್ತಕ ಪರಿಶೀಲಿಸಿ ದೃಢೀಕರಿಸಬೇಕು.
2. ಡಯಟಗಳಲ್ಲಿ ನಿಯಮ-32 ರಡಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಾಗಿದ್ದಲ್ಲಿ ಪ್ರಾಂಶುಪಾಲರು ದೃಢೀಕರಿಸತಕ್ಕದ್ದು.

ಸರ್ಕಾರಿ ಪ್ರೌಢಶಾಲೆ ಶಿಕ್ಷಕರ ಜೇಷ್ಠತಾ ಸಂಖ್ಯೆ---------------
ಘಟಕ ಸರ್ಕಾರಿ/ಟಿಡಿಬಿ/ಮುನಿಸಿಪಲ್

ವಿಶೇಷ ವರದಿ ದೃಢೀಕರಣ ಪತ್ರ

ಶ್ರೀ/ಶ್ರೀಮತಿ--------------------------------------------------------------------------------------ಇವರ ಸೇವಾ ಮಾಹಿತಿಯನ್ನು ಪರಿಶೀಲಿಸಲಾಗಿದೆ.--------------------- ರಿಂದ-------------------ನೇ ಸಾಲಿನವರೆಗೆ ಇವರ ಕಾರ್ಯ ನಿರ್ವಹಣೆಯಲ್ಲಿ ಯಾವುದೇ ರೀತಿಯ ವ್ಯತಿರಿಕ್ತ ಷರಾ ಇರುವದಿಲ್ಲ. ಹಾಗೂ ಇವರ ಸೇವೆಯು ತೃಪ್ತಿಕರವಾಗಿದೆ
ಎಂದು ದೃಢೀಕರಿಸಿದೆ.

ದಿನಾಂಕ:
ಸ್ಥಳ :

ಉಪನಿರ್ದೇಶಕರು(ಆಡಳಿತ/ಅಭಿವೃದ್ಧಿ)
ಸಹಿ ಹಾಗೂ ಕಚೇರಿಯ ಮೊಹರು
ಸಾರ್ವಜನಿಕ ಶಿಕ್ಷಣ ಇಲಾಖೆ
---------------- ಜಿಲ್ಲೆ

ದೃಢೀಕರಣ ಪತ್ರ

ಶಿಸ್ತು ಪ್ರಕರಣ ಬಾಕಿ ಇಲ್ಲದಿರುವ ಬಗ್ಗೆ
ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಜೇಷ್ಠತಾ ಸಂಖ್ಯೆ

ಶ್ರೀ/ಶ್ರೀಮತಿ----------------------------------------------------------------------------------------ಇವರ ಸೇವಾ ಮಾಹಿತಿಯನ್ನು ಪರಿಶೀಲಿಸಲಾಗಿ, ಸದರಿಯವರ ಮೇಲೆ ಯಾವುದೇ ತೆರವಾದ ಇಲಾಖಾ ವಿಚಾರಣೆಯಾಗಲೀ, ನ್ಯಾಯಾಂಗ ವಿಚಾರಣೆಯಾಗಲೀ, ಕ್ರಿಮಿನಲ್ ಮೋಕದ್ದಮೆಯಾಗಲೀ, ಶಿಸ್ತಿನ ಪ್ರಕರಣಗಳಾಗಲೀ ಬಾಕಿ ಇರುವದಿಲ್ಲವೆಂದು ಮತ್ತು ಹೂಡುವ ಸಂಭವ ಇರುವದಿಲ್ಲವೆಂದು ದೃಢೀಕರಿಸಿದೆ.

ದಿನಾಂಕ :

ಸ್ಥಳ ;

ಉಪನಿರ್ದೇಶಕರು(ಆಡಳಿತ/ಅಭಿವೃದ್ಧಿ)
ಸಹಿ ಹಾಗೂ ಕಚೇರಿಯ ಮೊಹರು
ಸಾರ್ವಜನಿಕ ಶಿಕ್ಷಣ ಇಲಾಖೆ